# ರಾಮನಗರ ತಾಲ್ಲೂಕಿನ ಜನಪದ ಕಲೆಗಳು: ಒಂದು ನೋಟ

ತಿಮ್ಮೇಗೌಡ ಬಿ.ಪಿ.
ಸಂಶೋಧನಾ ವಿದ್ಯಾರ್ಥಿ, ಎಸ್.ಜೆ.ಬಿ.ಸಿ.ಎಂ.ಎಸ್. ಕನ್ನಡ ಸಂಶೋಧನಾ ಕೇಂದ್ರ, ಕೆಂಗೇರಿ, ಬೆಂಗಳೂರು.

DOI: https://doi.org/10.5281/zenodo.15124082

## ABSTRACT:

ಜನಪದ ಕಲೆಯು ಮಾನವನ ಅಂತರಾಳದ ಭಾವನೆಯನ್ನು ವ್ಯಕ್ತಪಡಿಸುವಂತಹ ಒಂದು ಮಾಧ್ಯಮವಾಗಿದೆ. ಜೊತೆಗೆ ಮಾನವ ಜೀವನದ ಅವಿಭಾಜ್ಯವಾದ ಅಂಗವಾಗಿದೆ. ಗಾಳಿ, ನೀರು, ಆಹಾರ ಹೇಗೆ ಮುಖ್ಯವೋ ಹಾಗೇ ಜನಪದ ಕಲೆಯೂ ಸಹ ಅಷ್ಟೇ ಮುಖ್ಯವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಮಾನವನು ಪ್ರಾಣಿ, ಪಕ್ಷಿಗಳಂತೆ ಮಾತು ಬಾರದೇ ಅವುಗಳಲ್ಲಿ ಒಂದಾದ ಜೀವಿಯಾಗಿ ಜೀವನವನ್ನು ಸಾಗಿಸುತ್ತಿದ್ದ ಕಾಲದಲ್ಲಿಯೇ ತನ್ನ ಮನಸ್ಸಿನಲ್ಲಿ ಮೂಡಿದ ಭಾವನೆಗಳಿಗೆ ಅನುಗುಣವಾಗಿ ವರ್ತಿಸುವಂತ ಬುದ್ಧಿಶಕ್ತಿಯನ್ನು ಪಡೆದ ನಂತರ, ಅವನ ಆಲೋಚನ ಶಕ್ತಿ, ತಾರ್ಕಿಕ ಶಕ್ತಿ ಮತ್ತು ಸೃಜನಶೀಲ ಶಕ್ತಿಗಳಿಂದಾಗಿ ಅವನು ಪ್ರಾಣಿ, ಪಕ್ಷಿಗಳಿಗಿಂತ ಭಿನ್ನವಾದ ಜೀವಿಯಾಗಿ ಬೆಳೆಯತೊಡಗಿದ ಕಾರಣದಿಂದ ತನ್ನ ಸುತ್ತಲಿನ ಪರಿಸರಕ್ಕೆ ಅನುಗುಣವಾಗಿ ತಾನು ವರ್ತಿಸಲಾರಂಭಿಸಿದನು. ಇದರಿಂದಾಗಿ ಆತನ ಮನಸ್ಸಿನಲ್ಲಿ ಅಡಗಿದ್ದ ಸುಪ್ತವಾದ ಭಾವನೆಗಳು ಕಲೆಯ ಹುಟ್ಟಿಗೆ ಕಾರಣವಾಗಿರಬಹುದಾಗಿದೆ.

## KEYWORDS:

ಝೂಲಾ, ಭಾಗವಂತಿಕೆ, ದೇವರಗುಡ್ಡ, ಕೋರಣ್ಯ, ಚೌದಂ, ಹವ್ಯಾಸಿ ಗುಡ್ಡಪ್ಪ, ಶರಾಯಿ, ಚೌಲಿ.

"ಜನಪದ ಕಲೆ ಲೌಕಿಕ ಸ್ವರೂಪದ್ದಾಗಿರಲಿ, ಧಾರ್ಮಿಕ ಸ್ವರೂಪದ್ದಾಗಿರಲಿ ಗ್ರಾಮದೇವತೆ, ಕ್ಷೇತ್ರದೇವತೆ, ಕುಲದೇವತೆ, ಮನೆದೇವತೆಗಳಿಗೆ ಸಂಬಂಧಿಸಿದಂತೆ ಆಚರಿಸುವ ಹಬ್ಬದ ಸಂದರ್ಭಗಳಲ್ಲೇ ಹೆಚ್ಚಾಗಿ ಇವು ಪ್ರದರ್ಶಿತವಾಗುತ್ತಿರುವುದು ವಿಚಾರಣೀಯ" ಜನಪದರು ಆರಾಧನೆಯ ಹಿನ್ನೆಲೆಯಲ್ಲಿ ಅವರು ತಮ್ಮ ಕಲೆಗಳನ್ನು ತಮ್ಮ ಕುಲದೇವತೆ, ಗ್ರಾಮದೇವತೆ, ಮನೆ ದೇವತೆಯ ಮುಂದೆ ಪ್ರದರ್ಶಿಸುತ್ತಾರೆ. ಇದು ಪರಂಪರಾಗತವಾಗಿ ಬಂದಿರುವಂತಹದ್ದು. ಸಮುದಾಯದ ಜನರೆಲ್ಲರೂ ಒಟ್ಟಿಗೆ ಸೇರಿ ಕುಣಿಯುವುದು, ಹಾಡುವುದು ಮುಂತಾದವುಗಳು ಏರ್ಪಡಬೇಕಾದರೆ ಅವರು ವಾಸಿಸುವ ಸ್ಥಳದಲ್ಲಿ ವಿಶೇಷವಾದ ಹಬ್ಬ ಹರಿದಿನಗಳು ಇರಲೇಬೇಕು. ಜನಪದರು ನಿತ್ಯ ಬಿಡುವಿಲ್ಲದ ಕೆಲಸಕಾರ್ಯಗಳಲ್ಲಿ ತೊಡಗಿಕೊಂಡಿರುವುದರಿಂದ ಅವರಿಗೆ ಹಬ್ಬ ಹರಿದಿನಗಳಂದು ಸ್ವಲ್ಪ ಬಿಡುವು ಮಾಡಿಕೊಂಡು ತನ್ನ ಸಮುದಾಯದವರ ಜೊತೆ ಧಾರ್ಮಿಕ ಆಚರಣೆಯ ಮೂಲಕ ಸಾಮೂಹಿಕ

ಕಲೆಗಳಲ್ಲಿ ಪಾಲ್ಗೊಳ್ಳುವಿಕೆಯನ್ನು ರೂಢಿಸಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ರಾಮನಗರ ತಾಲ್ಲೂಕಿನ ಜನಪದ ಕಲೆಗಳನ್ನು ಪ್ರಸ್ತುತ ಲೇಖನದಲ್ಲಿ ಅವಲೋಕಿಸಲಾಗಿದೆ.

ರಾಮನಗರ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾದ ರಾಮನಗರ ತಾಲ್ಲೂಕಿನಲ್ಲಿ ವೃತ್ತಿಯಾಧಾರಿತ ಜನಪದ ಕಲೆಗಳು ಹಾಗೂ ಪ್ರದರ್ಶನ ಜನಪದ ಕಲೆಗಳು ಎಂಬ ಎರಡು ರೀತಿಯ ಜನಪದ ಕಲೆಗಳು ಇಂದಿಗೂ ಪ್ರಚಲಿತದಲ್ಲಿವೆ.

ವೃತ್ತಿಯಾಧಾರಿತ ಜನಪದ ಕಲೆಗಳಲ್ಲಿ ತಮಟೆವಾದನವು ಪ್ರಮುಖವಾದುದಾಗಿದ್ದು, ರಾಮನಗರ ತಾಲ್ಲೂಕಿನಲ್ಲಿ ಪ್ರಮುಖವಾಗಿ ಮಾದಿಗ ಸಮುದಾಯದ ವೃತ್ತಿಯಾಧಾರಿತ ಜನಪದ ಕಲೆಗಳಲ್ಲಿ ತಮಟೆ ವಾದನವು ಮುಖ್ಯವಾದುದಾಗಿದೆ. ರಾಮನಗರ ತಾಲ್ಲೂಕಿನಲ್ಲಿ ಮಾದಿಗ ಸಮುದಾಯವಲ್ಲದೆ ಹೊಲೆಯ ಸಮುದಾಯವು ಸಹ ತಮಟೆ ವಾದನವನ್ನು ವೃತ್ತಿಯಾಗಿ ಸ್ವೀಕರಿಸದೆ ಹವ್ಯಾಸವಾಗಿ ಸ್ವೀಕರಿಸಿರುವುದನ್ನು ಕಾಣಬಹುದು. ಹೊಲೆಯ ಹಾಗೂ ಮಾದಿಗ ಸಮುದಾಯ ಇರುವ ರಾಮನಗರ ತಾಲ್ಲೂಕಿನ ಪ್ರತಿ ಗ್ರಾಮದಲ್ಲೂ ತಮಟೆ ವಾದನ ಮಾಡುವ ಕಲಾವಿದರು ಸಿಗುತ್ತಾರೆ. ರಾಮನಗರ ತಾಲ್ಲೂಕಿನಲ್ಲಿ ಮಾದಿಗ ಹಾಗು ಹೊಲೆಯ ಸಮುದಾಯದ ರಂಗಯ್ಯ, ಚಿಕ್ಕರಂಗಯ್ಯ, ಮಾಗಡಯ್ಯ, ದೊಡ್ಡರಂಗಯ್ಯ, ತಾಳವಾಡಿಯ ಕೆಂದಯ್ಯ, ಪುಟ್ಟಸಿದ್ದಯ್ಯ, ಸಿದ್ದಯ್ಯ, ನಿಂಗಯ್ಯ ಮುಂತಾದ ಕಲಾವಿದರು ಈ ವಾದ್ಯ ನುಡಿಸುವುದರಲ್ಲಿ ಪ್ರಖ್ಯಾತರು. ತಾಳವಾಡಿ ಮತ್ತು ಎರೆಹಳ್ಳಿಯ ಮಾದಿಗ ಸಮುದಾಯದ ಕಲಾತಂಡದವರು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿರುವುದನ್ನು ಕಾಣಬಹುದು.

ರಾಮನಗರ ತಾಲ್ಲೂಕಿನಲ್ಲಿ ಪ್ರಚಲಿತದಲ್ಲಿರುವ ವೃತ್ತಿಯಾಧಾರಿತ ಜನಪದ ಕಲೆಗಳಲ್ಲಿ ನಗಾರಿ ವಾದನವು ಒಂದಾಗಿದೆ. ನಗಾರಿಯು ಒಂದು ಚರ್ಮ ವಾದ್ಯ. ಪ್ರಾಚೀನ ಕಾಲದಲ್ಲಿ 'ಭೇರಿ ದುಂದುಬಿ' ಎಂದು ಕರೆಯುತ್ತಿದ್ದರು. "ನೆಲದಲ್ಲಿ ತಗ್ಗು ಮಾಡಿ, ಅದರ ಮೇಲೆ ಚರ್ಮವನ್ನು ಹೋಲಿಸಿ ಬಾರಿಸುತ್ತಿದ್ದ ವಾದ್ಯ" ಆದ್ದರಿಂದಲೇ ಇದನ್ನು ಭೂಮಿ ದುಂದುಬಿ ಎಂದು ಕರೆಯುತ್ತಿದ್ದರು. ಕೋಣ ಮತ್ತು ಎಮ್ಮೆಯ ಚರ್ಮದಿಂದ ತಯಾರಾದ ಈ ವಾದ್ಯವು ಬೇರೆ ಬೇರೆ ಉದ್ದೇಶಕ್ಕಾಗಿ ಬಳಸುತ್ತಿದ್ದರು. ಹಬ್ಬ-ಹರಿದಿನ, ಉತ್ಸವಗಳಲ್ಲಿ ತಮಟೆಯ ಜೊತೆ ಭಾರಿಸುತ್ತಿದ್ದರು. ಈ ನಗಾರಿಯನ್ನು ಎರಡು ಕೈಗಳಲ್ಲಿ ಬಾರಿಸುವ ವಾದ್ಯವಾಗಿದ್ದು, ಇದರ ಶಬ್ದ 'ಧಿಮು ಧಿಮನೆ' ಎಂದು ಬರುತ್ತದೆ. ಅದರಲ್ಲೂ ವಿಶೇಷವಾಗಿ ಹೆಣ್ಣು ದೇವತೆಗಳ ಉತ್ಸವದಲ್ಲಿ ಇದನ್ನು ಬಾರಿಸಲಾಗುತ್ತದೆ. ಪಟ್ಟದ ಕುಣಿತ, ಪೂಜಾಕುಣಿತದಲ್ಲಿ ಈ ನಗಾರಿಯನ್ನು ಬಾರಿಸಲೇಬೇಕು. ನಗಾರಿ ಬಾರಿಸುವವರು ಬಹುತೇಕ ತಮಟೆವಾದನಲ್ಲಿ ಇರುವವರೇ. ಬೇರೆ ಬೇರೆ ರಾಜ್ಯದಲ್ಲಿ ನಡೆಯುವ ಪಟ್ಟದ ಕುಣಿತ, ಪೂಜಾಕುಣಿತದ ಜೊತೆಗೆ

ನಗಾರಿ ಭಾರಿಸುವ ತಳ ಸಮುದಾಯದವರೆಂದರೆ ತಡಿಕವಾಗಿಲಿನ ರಂಗಸ್ವಾಮಿ, ನಾಗರಾಜು, ಚಿಕ್ಕರಂಗಯ್ಯ ಮುಂತಾದವರು ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ.

ಮುಂದುವರಿದು, ರಾಮನಗರ ತಾಲ್ಲೂಕಿನಲ್ಲಿ ಪ್ರಚಲಿತದಲ್ಲಿರುವ ಪ್ರಮುಖ ಪ್ರದರ್ಶನ ಜನಪದ ಕಲೆಗಳೆಂದರೆ:

**ಅ) ಡೊಳ್ಳು ಕುಣಿತ:** ಡೊಳ್ಳು ಕುಣಿತವು ರಾಮನಗರ ತಾಲ್ಲೂಕಿನಲ್ಲಿ ಕಂಡುಬರುವಂತಹ ಒಂದು ವಿಶಿಷ್ಟವಾದ ಕುಣಿತವಾಗಿದೆ. ಈ ಕುಣಿತವನ್ನು ಪ್ರದರ್ಶನ ಮಾಡುವವರು ಬೀರದೇವರ ಆರಾಧಕರಾಗಿದ್ದು, ಮೂಲತಃ ಈ ಕುಣಿತವು ಧಾರ್ಮಿಕ ಹಿನ್ನೆಲೆಯಿಂದ ಮೂಡಿ ಬಂದಿರುವುದಾಗಿದೆ. ಪ್ರಸ್ತುತ ಇದೊಂದು ಹವ್ಯಾಸಿ ಜನಪದ ಕಲೆಯಾಗಿದ್ದು ಸಮುದಾಯಗಳ ಭೇದವಿಲ್ಲದೆ ಎಲ್ಲರೂ ಕಲಿಯುತ್ತಾ, ವಿವಿಧ ಭಾಗಗಳಲ್ಲಿ ಪ್ರದರ್ಶನಗಳನ್ನು ನೀಡುತ್ತಿರುವುದನ್ನು ಕಾಣಬಹುದು. ರಾಮನಗರ ತಾಲ್ಲೂಕಿನ ಕುರುಬ ಸಮುದಾಯದವರೇ ಇರುವ ಅನೇಕ ಗ್ರಾಮಗಳಲ್ಲಿಯೂ ಡೊಳ್ಳು ಕುಣಿತದ ಕಲಾವಿದರಿರುವುದನ್ನು ಕಾಣಬಹುದು.

ಪ್ರಸ್ತುತ ಡೊಳ್ಳುಕುಣಿತವು ಒಂದು ಹವ್ಯಾಸಿ ಜನಪದ ಕಲೆಯಾಗಿ, ಜಾತಿಯ ಹಂಗಿಲ್ಲದೆ ರಾಮನಗರ ತಾಲ್ಲೂಕಿನಲ್ಲಿ ಬೆಳವಣಿಗೆ ಹೊಂದುತ್ತಿದೆ. ಕುರುಬ ಸಮುದಾಯದ ಕಲೆಯಾದ ಡೊಳ್ಳುಕುಣಿತವು ಇಂದು ವಿದ್ಯಾವಂತ ಯುವಜನರ ಆಕರ್ಷಕ ಕಲೆಯಾಗಿ ಮಾರ್ಪಡುತ್ತಿದೆ. ತಾಲ್ಲೂಕಿನ ಹನುಮಂತೇಗೌಡನದೊಡ್ಡಿ ಗ್ರಾಮದ ಹನುಮಂತಯ್ಯ, ಕೃಷ್ಣಪ್ಪ, ಜಗದೀಶ್. ಎಸ್., ಹನುಮಂತಯ್ಯ. ಬಿ., ವಿನಯ್. ಎಚ್. ಕೆ., ಸಂಜೀವಯ್ಯ, ರಾಜು. ಎಸ್. ಕೆ., ಕಾಳೇಗೌಡನದೊಡ್ಡಿಯ ಜಯರಾಮ, ರಾಂಪುರದ ಪ್ರಕಾಶ್. ಆರ್. ಬಿ., ಸುರೇಶ್ ಕುಮಾರ್. ಆರ್. ಕೆ., ಕಗ್ಗಲಹಳ್ಳಿಯ ದಾಸ ನರಸಯ್ಯ, ದೇವರಾಜು, ಕೂಟಗಲ್ ಹೋಬಳಿ ಅಂಕನಹಳ್ಳಿ ಗ್ರಾಮದ ಅನಿಲ್ ಕುಮಾರ್. ಎ. ಎಸ್., ಸುನಿಲ್ ಕುಮಾರ್. ಎ. ಎಸ್., ಡೊಳ್ ಚಂದ್ರು, ಶ್ರೀನಿವಾಸ್, ಶಿವಕುಮಾರ್. ಎ. ಎಸ್., ಗುಡ್ಡೇಗೌಡ. ಡಿ., ಮೇದರಮದರಸಾಬರದೊಡ್ಡಿಯ ವೆಂಕಟೇಶ, ಹೇಮಗಿರಿಯಯ್ಯ, ಕೂಟಗಲ್ ಗ್ರಾಮದ ರಮೇಶ್, ಶಿವಪ್ಪ, ರಾಮಯ್ಯ. ಕೆ. ಆರ್., ಮಹೇಶ್. ಎಂ., ಜಗದೀಶ್ ಕುಮಾರ್. ಸಿ., ಸತೀಶ್, ಮಹೇಶ್., ರಾಜು, ನರಸಿಂಹಯ್ಯ, ಸುರೇಶ್. ವಿ., ತಿಬ್ಬೇಗೌಡನ ದೊಡ್ಡಿ ಅರುಣ್ ಕುಮಾರ್ ಟಿ. ಎಸ್., ಕೊಂಕಾಣಿದೊಡ್ಡಿ ಗಂಗಾಧರ್ ಮುಂತಾದವರು ಡೊಳ್ಳು ಕುಣಿತದ ಪ್ರಮುಖ ಕಲಾವಿದರಾಗಿದ್ದಾರೆ.

**ಆ) ಪೂಜಾ ಕುಣಿತ:** ಶಕ್ತಿ ದೇವತೆಗಳಿಗೆ ಸಂಬಂಧಿಸಿದ ಪೂಜಾಕುಣಿತ ರಾಮನಗರ ತಾಲ್ಲೂಕಿನಲ್ಲಿ ಕಂಡು ಬರುವ ಜನಪದ ಸಾಂಪ್ರದಾಯಿಕ ನೃತ್ಯ. ಆಯಾ ಗ್ರಾಮದೇವತೆಯರ ಪ್ರತೀಕಗಳೇ ಈ ಪೂಜೆಗಳು. ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ

ಗುಡಿಯೊಳಗಿನ ದೇವತೆ 'ಪೂಜೆ'ಯ ರೂಪದಲ್ಲಿ ಹೊರಬರುತ್ತಾಳೆ. ಬಿದಿರಿನ ತಟಿಕೆಯ ಮಧ್ಯೆ ದೇವತೆಯ ಮುಖವಾಡಗಳನ್ನು ಇರಿಸಿಕೊಂಡು ಕುಣಿಯಲಾಗುತ್ತದೆ. ಸಾಮಾನ್ಯವಾಗಿ ಮೂಲವಿಗ್ರಹಗಳೊಂದಿಗೆ ಉತ್ಸವ ಮೂರ್ತಿಗಳೂ ಇರುವುದುಂಟು. ಮೂಲವಿಗ್ರಹ ಆಕಾರದಲ್ಲಿ ದೊಡ್ಡದಾಗಿದ್ದು ಅದನ್ನು ಯಾವುದೇ ಕಾರಣಕ್ಕೂ ಹೊರತೆಗೆಯುವುದಿಲ್ಲ. ಶಿಲಾವಿಗ್ರಹಗಳು ಅಥವಾ ವಿವಿಧ ಬಗೆಯ ಮಣ್ಣು ಮುಂತಾದವುಗಳಿಂದ ಮಾಡಿರಲಾಗುತ್ತದೆ. ಇವುಗಳನ್ನು ಆಯಾ ದೇವತೆಗಳ ನಂಬಿಕೆ ಸಂಪ್ರದಾಯಾಚರಣೆಗಳಿಗನುಗುಣವಾಗಿ ಸಿಂಗರಿಸಲಾಗುತ್ತದೆ. ಮೆರೆಯುವ ಮೂರ್ತಿಗಳನ್ನು ಕಂಚು, ಹಿತ್ತಾಳೆ, ಅಥವಾ ಬೆಳ್ಳಿಯಿಂದ ತಯಾರಿಸಲಾಗುತ್ತದೆ. ಇಂಥವನ್ನು ವಿಗ್ರಹ ಎನ್ನುವುದಕ್ಕಿಂತ ಮುಖವಾಡಗಳು ಎನ್ನಬಹುದು. ಇವುಗಳನ್ನು ಬಗೆಬಗೆಯಲ್ಲಿ ಸಿಂಗರಿಸಿ ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿ ಮಂಟಪೋತ್ಸವ ಮಾಡುವುದುಂಟು. ಪಲ್ಲಕ್ಕಿಯಲ್ಲೋ ಅಡ್ಡೆಗಳಲ್ಲೋ ಅಥವಾ ಗುಡ್ಡಪ್ಪನ ತಲೆಯ ಮೇಲೆ ಹೊತ್ತೋ ಮೆರೆಸಲಾಗುತ್ತದೆ. ಹೀಗೆ ರೂಢಿಗತವಾಗಿ ಬಂದದ್ದೇ ಪೂಜಾ ಕುಣಿತವೆನ್ನಬಹುದು. ಇದು ನಿರ್ದಿಷ್ಟ ದೇವರಿಗೆ ನಡೆಸುವ ಸೇವೆಯಲ್ಲ. ಯಾವಾವ ದೇವರ ಹೆಸರಿನಲ್ಲಿ ಪೂಜೆ ಕಟ್ಟಲಾಗುತ್ತದೆಯೋ ಆಯಾಯ ದೇವರ ಪೂಜಾ ಕುಣಿತವೆನ್ನಿಸಿಕೊಳ್ಳುತ್ತದೆ. ಪೂಜೆ ಎಂದರೆ ಕಳಸ. ಕಳಸದ ರೂಪದಲ್ಲಿ ದೇವರನ್ನು ಕುಳ್ಳಿರಿಸಿ ಹೊತ್ತು ಮೆರೆಯುವುದನ್ನು ಪೂಜಾಕುಣಿತವೆಂದು ಕರೆಯಲಾಗುತ್ತದೆ.

ರಾಮನಗರ ತಾಲ್ಲೂಕಿನಲ್ಲಿ ಪೂಜಾಕುಣಿತ ಕಲಾವಿದರ ದಂಡೇ ಇದೆ. ಇವರಲ್ಲಿ ಕೂಟಗಲ್ ಹೋಬಳಿ ಅಂಕನಹಳ್ಳಿ ಗ್ರಾಮದ ಶಿವಣ್ಣ, ಇದೇ ಗ್ರಾಮದ ಎ. ಎಸ್. ಶಿವಕುಮಾರ್(ಪ್ರಸ್ತುತ ನಿಧನರಾಗಿದ್ದಾರೆ), ಹಾಗಲಹಳ್ಳಿ ಸಮೀಪದ ರಾಂಪುರದ ಸುರೇಶ್ ಕುಮಾರ್. ಆರ್. ಕೆ., ಕೈಲಾಂಚ ಹೋಬಳಿ ಚನ್ನಮಾನಹಳ್ಳಿಯ ಮಂಜುನಾಥ್. ಸಿ. ಜೆ, ದೇವರದೊಡ್ಡಿ ಗ್ರಾಮದ ಕಾಂತನಾಯ್ಕ, ಕಸಬಾ ಹೋಬಳಿ ಸುಗ್ಗನಹಳ್ಳಿಯ ಶಿವಣ್ಣ, ಕರಡಿದೊಡ್ಡಿ ಗ್ರಾಮದ ಮಾಯಣ್ಣ, ಇದೇ ಗ್ರಾಮದ ರಾಮಚಂದ್ರ, ರಾಮನಗರ ಪಟ್ಟಣದ ಹನುಮಂತನಗರದ ಶಿವಣ್ಣ, ಇದೇ ಬಡಾವಣೆಯ ಶ್ರೀನಿವಾಸ. ಡಿ., ಶಿವಕುಮಾರ್. ಎಸ್., ರವರು ಮುಖ್ಯರಾದವರು.

**ಇ) ವೀರಭದ್ರನ ಕುಣಿತ ಅಥವಾ ವೀರಗಾಸೆ:** ವೀರಭದ್ರನ ಪ್ರತಾಪವನ್ನು ಹೇಳುತ್ತಾ, ಕಾಸೆಯನ್ನು ಕಟ್ಟಿ ರೌದ್ರಾವತಾರದಲ್ಲಿ ಕುಣಿಯುವ ಕುಣಿತವೆ ವೀರಭದ್ರನ ಕುಣಿತ. ಈ ಕುಣಿತವು ಜನಪದ ಕಲೆಗಳಲ್ಲಿ ಕಂಡು ಬರುವಂತಹ ವಿಶಿಷ್ಟವಾದ ಕುಣಿತವಾಗಿದೆ. ಈ ಕುಣಿತವನ್ನು ಲಿಂಗಧಾರಣೆಯಾದ ಅರ್ಚಕರು ಅಥವಾ ತಮ್ಮಡಿಗಳು ಕಾಸೆ ಕಟ್ಟಿ ಕುಣಿಯುತ್ತಾರೆ. ಇದು ಇವರಿಗೆ ವಂಶಪಾರಂಪರ್ಯವಾಗಿ ಬಂದಂತಹ ಕಲೆಯಾಗಿದೆ. “ದಕ್ಷಿಣ ಕರ್ನಾಟಕದಲ್ಲಿ ಇವರನ್ನು ಲಂಗಭೇದ, ಲಂಗಧೀರ, ಲಿಂಗವೀರ ಕುಣಿತವೆಂದೂ, ಉತ್ತರ ಕರ್ನಾಟಕದ ಪುರವಂತರ ಕುಣಿತವೆಂದೂ ಗುರುತಿಸ್ಪಡುತ್ತದೆ”.

ರಾಮನಗರ ತಾಲೂಕಿನಲ್ಲಿ 'ವೀರಗಾಸೆ', 'ಲಿಂಗದ ಬೀರಪ್ಪ', ಲಂಗಿ ವೀರ' ಎಂದು ಗುರುತಿಸುತ್ತಾರೆ.

ರಾಮನಗರ ತಾಲ್ಲೂಕಿನಲ್ಲಿ ಈ ಕಲೆಯನ್ನು ವೀರಶೈವ ಸಮುದಾಯದವರು ಇರುವ ಗ್ರಾಮದ ಹಬ್ಬಗಳು, ಒಕ್ಕಲಿನ ಭಕ್ತರ ಮನೆಯ ವಿಶೇಷ ಕಾರ್ಯಗಳಲ್ಲಿ, ಕಾರ್ತೀಕ, ಶ್ರಾವಣ, ಸೋಮವಾರ, ಶುಕ್ರವಾರದಂದು ಪ್ರದರ್ಶಿಸಲಾಗುತ್ತದೆ. ವೀರಭದ್ರನ ಕುಣಿತದವರು ತಲೆಗೆ ಬಿಳಿಯ ಚೌಲಿಯನ್ನು ಮತ್ತು ನಾಗರಹಾವಿನ ಕಿರೀಟವನ್ನು ಹಾಕಿಕೊಂಡಿರುತ್ತಾರೆ. ನೀಲಿ ಬಣ್ಣದ ನಿಲುವಂಗಿಯನ್ನು ಮತ್ತು ಕೆಂಪು ಬಣ್ಣದ ಶರಾಯಿ, ಕಿವಿಗೆ ರುದ್ರಾಕ್ಷಿ, ಹಣೆಗೆ ವಿಭೂತಿ, ಕೊರಳು, ತೋಳು, ಮುಂಗೈಗಳಲ್ಲಿ ರುದ್ರಾಕ್ಷಿ ಮಾಲೆ, ನಾಗಾಭರಣ, ಎದೆಯ ಹತ್ತಿರ ವೀರಭದ್ರಸ್ವಾಮಿಯ ಹಲಗೆ ಇಷ್ಟನ್ನು ಧರಿಸಿರುತ್ತಾರೆ. ಸೊಂಟದಲ್ಲಿ ಚೌಲಿ ಹಾಕಿದ ಹಿತ್ತಾಳೆಯ ನರಸಿಂಹ ಮತ್ತು ದಕ್ಷಬ್ರಹ್ಮನ ಶಿರಗಳನ್ನು ಕಟ್ಟಿಕೊಂಡಿರುತ್ತಾರೆ. ಮೊಣಕಾಲಿಗೆ ಜಂಗು ಧರಿಸಿರುತ್ತಾರೆ. ಎಡಗೈಯಲ್ಲಿ ವೀರಭದ್ರನ ಹಲಗೆ, ಬಲಗೈಯಲ್ಲಿ ಕತ್ತಿಯನ್ನು ಹಿಡಿದಿರುತ್ತಾರೆ.

ರಾಮನಗರ ತಾಲ್ಲೂಕಿನಲ್ಲಿ ವೀರಗಾಸೆ ಕಲೆಗೆ ಸಂಬಂಧಿಸಿದಂತೆ ವೃತ್ತಿ ಕಲಾವಿದರು ಹೆಚ್ಚಾಗಿ ಕಾಣಸಿಗುವುದಿಲ್ಲ. ಆದರೆ ತಮ್ಮ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮಡಿ ಮೈಲಿಗೆಯ ದೃಷ್ಟಿಯಿಂದ ಆಯಾಯ ಮನೆತನದವರು ಹಾಗೂ ಆಯಾ ಊರಿನವರು ಈ ಕುಣಿತವನ್ನು ಕುಣಿಯುವುದನ್ನು ಕಾಣಬಹುದು.

**ಈ) ಕಂಸಾಳೆ:** ಕಂಸಾಳೆಯು ಶ್ರೀಮಲೆಮಾದೇಶ್ವರನ ಆರಾಧಕರು ಬಳಸುವ ಒಂದು ಕಂಚಿನ ವಾದ್ಯ. ಇವರು ಕಂಸಾಳೆಯನ್ನು ಬಾರಿಸುತ್ತ ಹಾಡುತ್ತ ನೃತ್ಯ ಮಾಡುತ್ತಾರೆ. ರಾಮನಗರ ತಾಲ್ಲೂಕಿನಲ್ಲಿ ಮಲೆ ಮಾದೇಶ್ವರನ ಒಕ್ಕಲಿನವರು ಹಾಗೂ ಹವ್ಯಾಸಿ ಕಲಾವಿದರು ಕಂಸಾಳೆಯನ್ನು ಬಾರಿಸುತ್ತಾರೆ. ''ಕಂಸ್ಯತಾಳ' ಎಂಬ ಶಬ್ದದಿಂದ ಕಂಸಾಳೆಯ ನಿಷ್ಪತ್ತಿಯನ್ನು ಹೇಳಲಾಗಿದೆ. ಕಂಸ್ಯತಾಳ ಎಂದರೆ ಕಂಚಿತ ತಾಳ. ಕಂಸಾಳೆ ಬಹಳ ಪ್ರಾಚೀನ ಕಾಲದಿಂದಲೇ ಬಳಕೆಯಲ್ಲಿದೆ. ರಾಘವಾಂಕನ ಕಾವ್ಯಗಳಲ್ಲಿ ಕಾಂಸ್ಯತಾಳದ ಉಲ್ಲೇಖವಿದೆ. ಇದಕ್ಕೆ ಕೈಸಾಲೆ, ಕೌಸಾಳೆ, ಕೈತಾಳ, ಬಟ್ಟು ಮುಂತಾದ ಪರ್ಯಾಯ ನಾಮಗಳಿವೆ''. ರಾಮನಗರ ತಾಲ್ಲೂಕಿನ ಕೆಲವು ಭಾಗದಲ್ಲಿ ಇದಕ್ಕೆ 'ಬಿರುದು' ಎಂದು ಸಹ ಕರೆಯುತ್ತಾರೆ.

ಕಂಸಾಳೆಯವರು ತಮ್ಮ ಆರಾಧ್ಯ ದೈವದ ಹೆಸರಿನಲ್ಲಿ ದೀಕ್ಷೆಯನ್ನು ಪಡೆದವರಾಗಿರುತ್ತಾರೆ. ಇವರನ್ನು ದೇವರಗುಡ್ಡ ಎಂದು ಕರೆಯುತ್ತಾರೆ. ಮಹದೇಶ್ವರ ಒಕ್ಕಲಿನವರಲ್ಲಿ ಮನೆಗೊಬ್ಬರನ್ನು ದೇವರಗುಡ್ಡರನ್ನಾಗಿ ಬಿಡುವ ಪದ್ಧತಿಯು ಇವರಲ್ಲಿ ವಂಶಪಾರಂಪರ್ಯವಾಗಿ ಬೆಳೆದು ಬಂದಿದೆ. ದೀಕ್ಷೆಯನ್ನು ಪಡೆದ ದೇವರಗುಡ್ಡನು

ಹಿರಿಯ ಗುಡ್ಡರುಗಳಿಂದ ಮಾದೇಶ್ವರನ ಕಥೆಯನ್ನು ಹೇಳುವುದನ್ನು ಕಲಿತುಕೊಳ್ಳುತ್ತಾರೆ. ಸೋಮವಾರ, ಶುಕ್ರವಾರದಂದು ಮಡಿಯಿಂದ ಮಾಹದೇಶ್ವರನ ಪೂಜೆ ಮಾಡಿ ಕೋರಣ್ಯಕ್ಕೆ ಹೋಗುವುದು ಸಂಪ್ರದಾಯವಾಗಿದೆ. ಕೋರಣ್ಯಕ್ಕೆ ಹೋದ ಸಂದರ್ಭದಲ್ಲಿ ಮಹದೇಶ್ವರನ ಮಹಿಮೆಯನ್ನು ಜನರಿಗೆ ತಿಳಿಸುತ್ತಾ ಮುಂದೆ ಸಾಗುತ್ತಾರೆ. ಶಿವರಾತ್ರಿ ಮತ್ತು ದೀಪಾವಳಿ ಸಂದರ್ಭದಲ್ಲಿ ಮಹದೇಶ್ವರಬೆಟ್ಟಕ್ಕೆ ಹೋಗಿ ಮಹದೇಶ್ವರನ ದರ್ಶನವನ್ನು ಪಡೆದು ಬರುತ್ತಾರೆ.

ರಾಮನಗರ ತಾಲ್ಲೂಕಿನಲ್ಲಿ ಕಂಸಾಳೆಯು ಯುವಜನರಲ್ಲಿ ಹವ್ಯಾಸಿ ಜನಪದ ಕಲೆಯಾಗಿ ಹೊರಹೊಮ್ಮುತ್ತಿದೆ. ಶಾಲಾಕಾಲೇಜುಗಳಲ್ಲಿ ನಡೆಯುವ ಪ್ರತಿಯೊಂದು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಂಸಾಳೆ ಕಲೆಯನ್ನು ಪ್ರದರ್ಶಿಸುವ ವಿದ್ಯಾರ್ಥಿಗಳನ್ನು ಕಾಣಬಹುದು. ಅದರಲ್ಲೂ ತಾಲ್ಲೂಕಿನ ಜಾನಪದ ಲೋಕವು ನಡೆಸುವ ಡಿಪ್ಲಮೊ ತರಗತಿಗಳಲ್ಲಿ ಹಾಗೂ ಜನಪದ ಕಾರ್ಯಕ್ರಮಗಳಲ್ಲಿ ಕಂಸಾಳೆಯ ಪ್ರದರ್ಶನಕ್ಕೆ ಆದ್ಯತೆಯನ್ನು ನೀಡಿರುವ ಕಾರಣದಿಂದ ಈ ಕಲೆಯು ತಾಲ್ಲೂಕಿನಲ್ಲಿ ಬೆಳವಣಿಗೆ ಹೊಂದುತ್ತಿದೆ. ರಾಮನಗರ ತಾಲ್ಲೂಕಿನ ಕೈಲಾಂಚ ಹೋಬಳಿ ಅಂಕನಹಳ್ಳಿಯ ಲೋಕೇಶ್. ಪಿ. ರವರು ಪ್ರಸ್ತುತ ಕಂಸಾಳೆ ಕಲೆಯ ಪ್ರದರ್ಶನದಲ್ಲಿ ಪ್ರಸಿದ್ಧಿ ಪಡೆದಿರುವುದನ್ನು ಕಾಣಬಹುದು.

**ಉ) ಬೀರದೇವರ ಕುಣಿತ:** ಬೀರದೇವರ ಕುಣಿತವು ಜನಪದ ಕುಣಿತಗಳಲ್ಲಿ ಕಂಡುಬರುವಂತಹ ವಿಶಿಷ್ಟವಾದ ಕುಣಿತವಾಗಿದೆ. ಈ ಕುಣಿತವನ್ನು ಕುರುಬ ಸಮುದಾಯಕ್ಕೆ ಸೇರಿದ ಶ್ರೀ ಬೀರೇಶ್ವರಸ್ವಾಮಿ ಒಕ್ಕಲಿನವರು ಮಾಡುತ್ತಾರೆ. ಚೌಕಾರದ ಬಿದಿರಿನ ತಳಿಯ ಮಧ್ಯದಲ್ಲಿ ಬೀರದೇವರ ಹಲಗೆಯನ್ನು ಇಟ್ಟುಕೊಂಡು ತಲೆಯ ಮೇಲೆ ಹೊತ್ತು ಕುಣಿಯುವುದಕ್ಕೆ 'ಬೀರದೇವರ ಕುಣಿತ' ಎನುತ್ತಾರೆ. ಚಾಮರಾಜ ನಗರ ಜಿಲ್ಲಾ ಭಾಗದಲ್ಲಿ ಪ್ರಸಿದ್ಧಿ ಪಡೆದಿರುವ ಈ ಕುಣಿತವು ರಾಮನಗರ ತಾಲ್ಲೂಕಿನಲ್ಲಿ ಕುರುಬ ಸಮುದಾಯದವರು ಇರುವ ಕಡೆ ಹಾಗೂ ಈ ಕಲೆಯ ಬಗ್ಗೆ ಆಸಕ್ತಿ ಹವ್ಯಾಸ ಹೆಚ್ಚುತ್ತಿರುವುದರಿಂದ ಇತ್ತೀಚೆಗೆ ಪ್ರಚಲಿತಕ್ಕೆ ಬರುತ್ತಿದೆ.

ರಾಮನಗರ ತಾಲ್ಲೂಕಿನಲ್ಲಿ ಈ ಕಲೆಯನ್ನು ವೃತ್ತಿಯನ್ನಾಗಿ ಸ್ವೀಕರಿಸಿರುವವರು ಬಹುತೇಕ ಇಲ್ಲವೇ ಇಲ್ಲ ಎನ್ನಬಹುದು. ಆದರೆ ತಮ್ಮ ಮನೆದೇವರಾದ ಬೀರದೇವರನ್ನು ಉತ್ಸವ, ಮದುವೆ, ಗೃಹಪ್ರವೇಶ, ಗಣೇಶ ಹಬ್ಬ, ಆಯುಧ ಪೂಜೆ, ಯುಗಾದಿ ಹಬ್ಬದಂದು, ಆಯುಧ ಪೂಜೆ, ಕೊಂಗಳ್ಳಿಬೆಟ್ಟದ ಜಾತ್ರೆ, ತಾಳವಾಡಿ ಜಾತ್ರೆ, ಬಸವನ ಜಯಂತಿ ಮುಂತಾದ ಸಂದರ್ಭದಲ್ಲಿ ಹೊತ್ತು ಕುಣಿಯುವುದನ್ನು ಕಾಣಬಹುದು.

**ಊ) ಕೋಲಾಟ:** ಕೋಲಾಟವು ಜನಪದ ಆಟಗಳಲ್ಲಿ ವಿಶಿಷ್ಟವಾದಂತಹ ಆಟವಾಗಿದೆ.

ಇದರಲ್ಲಿ ಸಂಗೀತ, ನೃತ್ಯವನ್ನು ಒಳಗೊಂಡಿರುವುದರಿಂದ ಕಲೆಯಾಗಿ ಗುರುತಿಸಿಕೊಳ್ಳುತ್ತದೆ. ಈ ಕಲೆಯಲ್ಲಿ ಕೋಲುಗಳೇ ಪ್ರಧಾನವಾಗಿರುವುದರಿಂದ ಇದಕ್ಕೆ ಕೋಲಾಟ ಎಂದು ಹೆಸರು ಬಂದಿದೆ. ಇದನ್ನು ಪುರುಷರು ಮತ್ತು ಮಹಿಳೆಯರು ಆಡುತ್ತಾರೆ. ಆದರೆ ಮಹಿಳೆಯರಿಗಿಂತ ಪುರುಷರೇ ಹೆಚ್ಚು ಆಡುವುದರಿಂದ ಇದನ್ನು 'ಗಂಡು ಕಲೆ' ಎಂದು ಕರೆಯುತ್ತಾರೆ. ಕೋಲಾಟವನ್ನು ಆಡುವುದಕ್ಕೆ ನಿರ್ದಿಷ್ಟವಾದ ಯಾವುದೇ ವಯೋಮಿತಿ ಇಲ್ಲ. ಈ ಆಟವನ್ನು ಹೆಚ್ಚಾಗಿ ಯುವ ಸಮುದಾಯದವರೆ ಆಡುತ್ತಾರೆ. ಏಕಕಾಲದಲ್ಲಿ ಅನೇಕ ಜನರು ಕೂಡಿ ಆಡಬಹುದಾದಂತಹ ಗ್ರಾಮೀಣ ಕಲೆಯಾಗಿದೆ. “ಕೋಲಾಟವು ಬಯಲಾಟಗಳು ನಮ್ಮ ಗ್ರಾಮಕಲೆಯ ಎರಡು ಕಣ್ಣುಗಳು, ಬಹು ಪ್ರಾಚೀನ ಕಾಲದಿಂದಲೂ ಜಾನಪದ ಜೀವನದಲ್ಲಿ ಮನರಂಜನೆಯ ಮುಖ್ಯ ಸಾಧನಗಳಾಗಿ ಇವು ಉಳಿದುಕೊಂಡು ಬಂದಿವೆ. ಮನರಂಜನೆಯ ಜೊತೆಗೆ ಹಳ್ಳಿಗರ ಬದುಕಿನ ಉತ್ಸಾಹ ಲವಲವಿಕೆಗಳನ್ನು ತುಂಬುವುದರಲ್ಲೂ ಇವು ಸಹಕಾರಿಯಾಗಿವೆ. ಇವೆರಡರಲ್ಲಿ ಕೋಲಾಟ ಬಹು ಸುಲಭ ಸಾಧ್ಯವಾದ, ಸರಳವಾದ ಜಾನಪದ ಕಲೆ, ಯಾವ ವೇಷ ಭೂಷಣವೂ ಯಾವ ವಾದ್ಯ ವಿಶೇಷಗಳ ಹಿನ್ನೆಲೆಯೂ ರಂಗಸಜ್ಜಿಕೆಯೂ ಬೇಕಾಗದ ಈ ಕಲೆ ಎಲ್ಲಿಯಾದರೂ ಯಾವ ಗಳಿಗೆಯಲ್ಲಿ ಬೇಕಾದರು ವಿರಾಮ ದೊರೆತಾಗಲೆಲ್ಲ ಹಳ್ಳಿಗರಿಗೆ ಆನಂದ ನೀಡಬಲ್ಲ ಉತ್ತಮ ಸಾಧನವಾಗಿದೆ”

ನಾಡಿನಾದ್ಯಂತ ಪ್ರಸಿದ್ದಿ ಪಡೆದಿರುವ ಕೋಲಾಟವು ರಾಮನಗರ ತಾಲ್ಲೂಕಿನಲ್ಲೂ ಜನಪದ ಪ್ರದರ್ಶನ ಕಲೆಯಾಗಿ ಜನಪ್ರಿಯತೆ ಗಳಿಸಿದೆ. ಇತ್ತೀಚೆಗೆ ಕೋಲಾಟವನ್ನು ಕಲಿಯುವ ಆಸಕ್ತಿ ಯುವಜನಾಂಗದಲ್ಲಿ ಮೂಡುತ್ತಿರುವ ಕಾರಣ, ಜೊತೆಗೆ ಪ್ರದರ್ಶನಕ್ಕೆ ಅವಕಾಶಗಳು ಲಭ್ಯವಾಗುತ್ತಿರುವ ಕಾರಣಕ್ಕೆ ಕೋಲಾಟವು ಪ್ರಮುಖ ಜನಪದ ಪ್ರದರ್ಶನ ಕಲೆಯಾಗಿ ತಾಲ್ಲೂಕಿನಲ್ಲಿ ಗುರುತಿಸಿಕೊಳ್ಳುತ್ತಿದೆ. ಕೋಲಾಟವು ಒಂದು ಜನಪ್ರಿಯವಾದ ಮನೋರಂಜನೆಯ ಕಲೆಯಾಗಿದ್ದು, ಇದರಲ್ಲಿ ಅನೇಕ ಪ್ರಕಾರಗಳು ಇವೆ. “ಸುತ್ತುಕೋಲು, ದಾಟ್ಕೋಲು, ತೂಗುಕೋಲು, ಬಿಚ್ಚುಕೋಲು, ಸಾಲುಕೋಲು, ಒಂದಾಳ್ ಮತ್ತು ಎರಡಾಳ್ ಸುತ್ತು, ಮೂರಾಳ್ ಸುತ್ತು, ಆಳು ಕಂದು ಆಳು, ಮಲ್ಕಿನ ಕೋಲು, ಮುರವಯ್ಯನ ಕೋಲು, ಐದು ಚಿಟಗೆನ ಕೋಲು, ಎರಡಾಳು ಜಗ್ಗು, ಗೀಜಗನ ಕೋಲು, ಹುಲಿದನವಿನ ಕೋಲು ಗೀರ್ ಕಡ್ಡಿ ಕೋಲು, ಒಂಟಿಕೋಲು, ತೆಕ್ಕೋಲು, ವಸ್ತ್ರ ಕೋಲು, ರಂಗೋಲಿ ಕೋಲು, ಧಾಳಂಧಳಿ, ಒನಿಕೆ ಆಟ, ಚಕ್ರದಾಟ, ದಾವಣೆ ಕೋಲು, ಎಡಚಂಟಿಗೆ, ಏಳು ಚುಟಿಗಿ, ಚೌದಾ ಚುಟಗಿ, ಪಂಚವದನ, ಝುಲಾ, ತಾಳಕಟ್ಟಿಗೆ, ತಿಪ್ಪರಿ, ಒಂಟಿ ಕಡ್ಡಿ ಗೀರ್ ಕಡ್ಡಿ, ಆರ್ಕಡ್ಡಿ, ಕಾಳ್ಗಡ್ಡಿ, ತಟ್ಕಡ್ಡಿ, ಓನಾಟು, ಏಳು ಚುಟಕಿ, ಒಂಬತ್ತು ಚುಟಕಿ, ಮೇರಿ ಕೋಲು, ಗೋಪಿನ ಕೋಲು, ಚಿತ್ತಾರ ಗೊಂಬೆ ಕೋಲು, ಚಂಡಾಡುವ ಕೋಲು,

ಉಯ್ಯಾಲೆ ಕೋಲು, ದಂಡೆ ಕೋಲು, ಸೋಬಾನೆ ಕೋಲು, ಹರಗೋಲು, ಚಕ್ಕೆ ಕೋಲು, ಅಲವಣಿ ಕೋಲು, ಉದ್ರಿ ಕೋಲು, ಚಿನ್ನಾಡಿ ಕೋಲು, ಕಕುಕ್ಕರಗಾಲು ಕೋಲು, ಕತ್ರಿಕೋಲು, ಚಿತ್ರ ಕೋಲು, ಬಾನು ಕೋಲು, ಬೆಂಕಿ ಕೋಲು, ಜಡೆ ಕೋಲು ಮಲಕಿನ ಕೋಲು, ಕೊರವಂಜಿ ಕೋಲು" ಮುಂತಾದವುಗಳನ್ನು ಕಾಣಬಹುದು.

ರಾಮನಗರ ತಾಲ್ಲೂಕಿನ ಬಹುತೇಕ ಎಲ್ಲಾ ಶಾಲಾ ಕಾಲೇಜುಗಳಲ್ಲೂ ಕೋಲಾಟವು ಒಂದು ಸಾಂಸ್ಕೃತಿಕ ಕಾರ್ಯಕ್ರಮವಾಗಿ ಚಾಲ್ತಿಯಲ್ಲಿದೆ. ತಾಲ್ಲೂಕಿನ ಜಾನಪದ ಲೋಕದಲ್ಲಿ ನಡೆಯುವ ಡಿಪ್ಲಮೋ ತರಗತಿಗಳಲ್ಲಿ ಕೋಲಾಟವನ್ನು ಒಂದು ಕಲೆಯಾಗಿ ಕಲಿಸಿಕೊಡಲಾಗುತ್ತಿದೆ. ಆ ಕಾರಣಕ್ಕಾಗಿ ಇದು ಒಂದು ಹವ್ಯಾಸಿ ಜನಪದ ಕಲೆಯಾಗಿ ಜನಮನ್ನಣೆ ಗಳಿಸುತ್ತಿದೆ.

**ಖ) ತಂಬೂರಿ ಮೇಳ:** ಜನಪದ ಪ್ರದರ್ಶನ ಕಲೆಗಳಲ್ಲಿ ತಂಬೂರಿ ಮೇಳವೂ ಒಂದು. ರಾಮನಗರ ತಾಲ್ಲೂಕಿನಲ್ಲಿ ಈ ಕಲೆಯು ವಿರಳವಾಗಿದೆ. ತಂಬೂರಿ ಕಲಾಮೇಳದಲ್ಲಿ ಮಾದಿಗ, ಗೊಲ್ಲ , ಕುರುಬ ಸಮುದಾಯಗಳು ಭಾಗವಹಿಸುವುದುಂಟು. ತಂಬೂರಿಯು ನಾಲ್ಕು ತಂತಿಗಳನ್ನೊಳಗೊಂಡ ಶ್ರುತಿವಾದ್ಯ. ಶಾಸ್ತ್ರೀಯ ಸಂಗೀತದಲ್ಲಿನ ತಂಬೂರಿಗೂ ಜನಪದ ತಂಬೂರಿಯೇ ಮೂಲಾಧಾರ. ಈ ತಂಬೂರಿಯು ಉತ್ತರ ಕರ್ನಾಟಕದ, ದಕ್ಷಿಣ ಕರ್ನಾಟಕ ಎರಡೂ ಭಾಗಗಳಲ್ಲಿ ಕಂಡುಬರುತ್ತದೆಯಾದರೂ ಇದನ್ನು ಬಳಸುವ ಗಾಯಕರು ಬೇರೆ ಬೇರೆಯಾಗಿದ್ದಾರೆ. ಉತ್ತರ ಕರ್ನಾಟಕದ ಭಾಗದಲ್ಲಿ 'ಬಾಳಸಂತಹ'ರೆಂಬ ಗಾಯಕರು, ದಕ್ಷಿಣ ಕರ್ನಾಟಕದಲ್ಲಿ ಸಂಪ್ರದಾಯ ವೃತ್ತಿ ಗಾಯಕರಾದ ಮಂಟೇಸ್ವಾಮಿಯ ನೀಲಗಾರರು ಈ ವಾದ್ಯ ಬಳಸುತ್ತಾರೆ. ಇವರಲ್ಲದೇ 'ತಂಬೂರಿಯವರು' ಎಂಬ ಲೌಕಿಕ ಗಾಯಕರು ಇದ್ದಾರೆ. ಬಾಳಸಂತರು ಹಾಗೂ ನೀಲಗಾರರು ಬಳಸುವ ತಂಬೂರಿಯಲ್ಲಿ ಗಮನಾರ್ಹವಾದ ವ್ಯತ್ಯಾಸವೇನೂ ಕಂಡುಬರದು.

ತಂಬೂರಿಯೂ ವೈಷ್ಣವ ಸಂಪ್ರದಾಯದ ದಾಸಪರಂಪರೆಗೆ ಸೇರಿದ ವಾದ್ಯವಾಗಿ, ಇಂದಿಗೂ ಇದು ವೈಷ್ಣವ ಸಂಪ್ರದಾಯದ ವಾದ್ಯವಾಗಿಯೇ ಉಳಿದಿದೆ. ಮಂಟೇಸ್ವಾಮಿಯ ಶೈವಸಂಪ್ರದಾಯಕ್ಕೆ ವೈಷ್ಣವ ಸಂಪ್ರದಾಯದ ವಾದ್ಯದ ಸೇರ್ಪಡೆ ಹೇಗಾಯಿತೆಂಬುದಕ್ಕೆ. ನಿಖರವಾದ ಆಧಾರಗಳಿಲ್ಲ. ಆದರೆ ಮಂಟೇಸ್ವಾಮಿ ಕಾವ್ಯ ಕಥೆಗೆ ಹೊಂದಿಕೊಂಡಂತೆ ವಾದ್ಯ ಸಂಬಂಧದ ಸೂಕ್ಷ್ಮವಾದ ಎಳೆಯೊಂದು ಗೋಚರಿಸುತ್ತದೆ. ತಂಬೂರಿಯವರ ವೇಷಭೂಷಣಗಳು ಸಾಮಾನ್ಯವಾಗಿ ತಲೆಯ ಮೇಲೆ ಕೆಂಪು ಮುಂಡಾಸು, ಕಚ್ಚೆ-ಪಂಚೆ, ಉದ್ದವಾದ ನಿಲುವಂಗಿ, ಕರಿಕೋಟು ಧರಿಸಿ, ಕಾಲಿಗೆ ಗೆಜ್ಜೆ ಕಟ್ಟಿರುತ್ತಾರೆ. ಮುಖ್ಯಗಾಯಕ ತಂಬೂರಿ ಹಿಡಿದರೆ ಉಳಿದಿಬ್ಬರಲ್ಲಿ

ಒಬ್ಬರು ಗಗ್ಗರವನ್ನು ಇನ್ನೊಬ್ಬರು ಡಮರುಗಗಳನ್ನು ಹಿಡಿದಿರುತ್ತಾರೆ. ಹಣೆಯಲ್ಲು ವಿಭೂತಿ ಬಳಿದು ನಡುವೆ ಬೊಟ್ಟು ಇಟ್ಟಿರುತ್ತಾರೆ. ಇವರು ದೀಕ್ಷೆ ಪಡೆದವರು ಎಂಬುದನ್ನು ಸೂಚಿಸಲು ಕೊರಳಿಗೆ ಮೂರು ರುದ್ರಾಕ್ಷಿ ಮಣಿಗಳನ್ನು ಕಟ್ಟಿಕೊಂಡಿರುತ್ತಾರೆ. ಈ ರುದ್ರಾಕ್ಷಿಗಳು ಗುರುಕೊಟ್ಟ ಲಾಂಛನಗಳೆಂಬ ನಂಬಿಕೆ ಅವರದು. ತಂಬೂರಿಯವರು ಬಲಗೈಯಲ್ಲಿ ಸಿಂಹಮುಖದ ಅಥವಾ ನಾಗರಹೆಡೆಯಾಕಾರದ ತಂಬೂರಿ, ಎಡಗೈಯಲ್ಲಿ ಗಗ್ಗರ ಅಥವಾ ಚಿಟಗಿ ಹಿಡಿದು ಒಂಟಿಕಾಲಿಗೆ ಗೆಜ್ಜೆಕಟ್ಟಿ ಹಾಡುತ್ತಾ ಸಾಂದರ್ಭಿಕವಾಗಿ ಕಿರುಹೆಜ್ಜೆಯನ್ನು ಹಾಕುತ್ತಾ ಕುಣಿಯುತ್ತಾರೆ.

ರಾಮನಗರ ತಾಲ್ಲೂಕಿನ ಕೈಲಾಂಚ ಹೋಬಳಿಯ ಅಣ್ಣಹಳ್ಳಿ ಗ್ರಾಮದ ನಿಂಗರಾಜು, ಜವಳಗೆರೆದೊಡ್ಡಿಯ ತಂಬೂರಿ ಶಿವಣ್ಣ, ಹನುಮಂತೇಗೌಡನದೊಡ್ಡಿಯ ಶ್ರೀಮತಿ ರಾಜಮ್ಮನವರು ಮುಖ್ಯರಾದವರು. ಇವರು ಸಿದ್ದಪ್ಪಾಜಿ ಕಥೆ, ಮಂಟೆಸ್ವಾಮಿ ಹುಟ್ಟಿ ಬಂದ ಕಥೆ, ಮಲೆಮಾದೇಶ್ವರನ ಕಥೆ, ರಾಚಪ್ಪಾಜಿ ಕಥೆ, ಮಡಿವಾಳ ಮಾಚಯ್ಯನ ಕಥೆ, ಬಸವಣ್ಣನ ಕಥೆ, ಅರ್ಜುನ ಜೋಗಿ ಹಾಡು, ಮೈದಾಳ ರಾಮಣ್ಣನ ಹಾಡು, ಮೇಲುಕೋಟೆ ಚಲುವನಾರಾಯಣಸ್ವಾಮಿ ಕಥೆ, ಬಾಲನಾಗಮ್ಮನ ಕಥೆ, ಬೇವಿನಹಟ್ಟಿ ಕಾಳಮ್ಮನ ಕಥೆ, ಗಂಗೆ–ಗೌರಿ ಕಥೆ, ನೀಲವೇಣಿ ಪವಾಡ, ಚಾಮುಂಡೇಶ್ವರಿ ಕಥಾ ಪ್ರಸಂಗಗಳನ್ನು ಗಂಟೆಗಟ್ಟಲೆ ತಂಬೂರಿಯ ನಾದದೊಂದಿಗೆ ಹಾಡುತ್ತಾರೆ.

**ಎ) ಭಾಗವಂತಿಕೆ ಮೇಳ:** ರಾಮನಗರ ತಾಲ್ಲೂಕಿನಲ್ಲಿ ವಿರಳವಾಗಿ ಕಾಣಬರುವ ವೈಷ್ಣವ ಸಂಪ್ರದಾಯ ಪರಂಪರೆ ಹಿನ್ನೆಲೆಯುಳ್ಳ ಜನಪದ ಕಲಾಪ್ರಕಾರವೇ ಭಾಗವಂತಿಕೆ ಮೇಳ. ವಿಷ್ಣುವಿನ ವಿವಿಧ ರೂಪಗಳನ್ನು ಭಕ್ತರು ನಿರ್ದಿಷ್ಟ ಸಮಯದಲ್ಲಿ ಹಾಡಿ ಹೊಗಳಿ ಆಚರಿಸುವ ಉತ್ಸವ ಈ ಮೇಳ ತಿರುಪತಿ ತಿಮ್ಮಪ್ಪ, ಮೇಲುಕೋಟೆ ಚೆಲುವನಾರಾಯಣಸ್ವಾಮಿ, ಆಂಜನೇಯಸ್ವಾಮಿ, ಬೇಟೆರಾಯಸ್ವಾಮಿ, ಬೇಲೂರು ಚೆನ್ನಕೇಶವಸ್ವಾಮಿ, ಗರುಡದೇವರು, ರಾಮದೇವರು, ಗೋಪಾಲಕೃಷ್ಣ, ವೆಂಕಟರಮಣಸ್ವಾಮಿ ಮುಂತಾದ ದೈವರೂಪಗಳನ್ನು ಈ ಸಂಪ್ರದಾಯದವರು ಆರಾಧಿಸುತ್ತಾರೆ. ಸಾಮಾನ್ಯವಾಗಿ ಒಕ್ಕಲಿಗರಲ್ಲಿ ಪ್ರಚಲಿತವಿರುವ ಈ ಕುಣಿತಕ್ಕೆ ತಮಟೆ, ನಗಾರಿಗಳು ಹಿನ್ನೆಲೆ ವಾದ್ಯಗಳು, ಬಿಳಿಯ ಕಾಸೆಪಂಚೆ, ಬಿಳಿಯ ನಿಲವಂಗಿ, ಬಿಳಿಯ ರುಮಾಲು, ಸೊಂಟಕ್ಕೆ ಬಿಗಿದ ಬಣ್ಣದ ವಸ್ತ್ರ, ಕೊರಳಿಗೆ ಮಣಿಸರ, ಹಣೆಯಲ್ಲಿ ವೈಷ್ಣವ ಸಂಪ್ರದಾಯದ ಸಂಕೇತವಾದ ಒಂಟಿನಾಮ, ಒಂದು ಕೈಯಲ್ಲಿ ಮಡಸಿ ಹಿಡಿದ ಬಿಳಿಯ ಚೌಕ, ಕಾಲಿಗೆ ಗೆಜ್ಜೆ–ಇವು ಅವರ ಸಾಮಾನ್ಯ ವೇಷಭೂಷಣಗಳು.

ರಾಮನಗರ ತಾಲ್ಲೂಕಿನ ಕೂಟಗಲ್ ಹೋಬಳಿಯ ಡಣಾಯಕನಪುರದ ನರಸಿಂಹಯ್ಯ ಹಾಗೂ ಇದೇ ಗ್ರಾಮದ ಹೊಂಬಾಳಪ್ಪನವರು ತಾಲ್ಲೂಕಿನಲ್ಲಿ ಈ

ಕಲೆಯನ್ನು ಜೀವಂತವಾಗಿ ಇಟ್ಟಿರುವುದನ್ನು ಕಾಣಬಹುದು.

**ಏ) ಸೋಮನ ಕುಣಿತ:** ದಕ್ಷಿಣ ಕರ್ನಾಟಕದ ತುಮಕೂರು, ಮಂಡ್ಯ, ಹಾಸನ, ಬೆಂಗಳೂರು, ರಾಮನಗರ ಮುಂತಾದ ಜಿಲ್ಲೆಗಳಲ್ಲಿ ಆಚರಣೆಯಲ್ಲಿರುವ ಸಾಂಪ್ರದಾಯ ನೃತ್ಯಗಳಲ್ಲಿ ಸೋಮನ ಕುಣಿತವೂ ಒಂದು. ಇದೊಂದು ಗ್ರಾಮದೇವತೆಯ ಆರಾಧನಾ ಕುಣಿತವಾಗಿದೆ. ಒಕ್ಕಲಿಗ, ತಿಗಳ, ಬೆಸ್ತ, ನಾಯಕ ಮುಂತಾದ ಸಮುದಾಯದವರು ಸೋಮನ ಕುಣಿತದ ಆರಾಧನೆಯನ್ನು ಪರಂಪರಾಗತವಾಗಿ ರೂಢಿಸಿಕೊಂಡು ಬರುತ್ತಿದ್ದಾರೆ. ಸೋಮರಲ್ಲಿ ಇಬ್ಬರಿರುವುದು ಸಾಮಾನ್ಯವಾದರೂ ತುಮಕೂರು ಜಿಲ್ಲೆಯ ಗ್ರಾಮಗಳಲ್ಲಿ ಮೂವರು ಸೋಮರು ಇರುವುದು ವಿಶೇಷ. ಅವುಗಳೆಂದರೆ; ಭೂತರಾಯ, ಕೆಂಚರಾಯ, ಸಾಯುವ ಸೋಮ. ಪ್ರಾದೇಶಿಕವಾಗಿ ಇವುಗಳನ್ನೇ ಕೆಂಚಣ್ಣ, ಕರಿಯಣ್ಣ, ಈರಣ್ಣ, ಪಾತಯ್ಯ, ದೊಡ್ಡಯ್ಯ, ಆಳುವ ಸೋಮ, ಕರಿಯ ಸೋಮ, ಕೆಂಪು ಸೋಮ ಮುಂತಾದ ವಿಭಿನ್ನ ಹೆಸರುಗಳಿಂದಲೂ ಕರೆಯುವರು. ಸೋಮರು ಶಕ್ತಿದೇವತೆಯ ಅಂಗರಕ್ಷಕರೆಂದೇ ಪ್ರಸಿದ್ಧವಾಗಿರುವುದುಂಟು.

ಸೋಮನ ಕುಣಿತವೆಂಬುದು ಮುಖವಾಡ ಧರಿಸಿ ಮಾಡುವ ನೃತ್ಯ. ಮುಖವಾಡವೇ ಇದರ ಪ್ರಮುಖ ಆಕರ್ಷಣೆ ಎನ್ನಬಹುದು. ಇದನ್ನು ಪ್ರಾದೇಶಿಕವಾಗಿ ಭೂತಾಳೆ, ಹಾಲವಾಣ ಮುಂತಾದ ಮೆದು ಮರಗಳಿಂದ ತಯಾರಿಸುವರು. ಬೆತ್ತವನ್ನು ಬಗ್ಗಿಸಿ ಕಮಾನು ಆಕಾರವಾಗಿ ಮುಖವಾಡದ ತಲೆಯ ಮೇಲೆ ಕಟ್ಟುವರು. ಜೊತೆಗೆ ಸೋಮನನ್ನು ಹೊರುವವನು ಮುಖವಾಡದ ಹೊಳ್ಳೆಗಳ ಮೂಲಕ ನೋಡುವ ರೀತಿಯಲ್ಲೆ ಅವುಗಳನ್ನು ರೂಪಿಸಲಾಗುತ್ತದೆ. ಸೋಮನನ್ನು ಹೊರುವವನು ತುಂಬಾ ಮಡಿಯ ಕಟ್ಟುನಿಟ್ಟಿನ ವ್ಯಕ್ತಿಯೇ ಆಗಿರಬೇಕು. ಒಟ್ಟಾರೆ, ಸೋಮನ ಕುಣಿತ ಮುಖವಾಡದ ಅಪರೂಪದ ಕಲೆಯಂತೆ ಗಂಡುಕಲೆಯೂ ಹೌದು. ಅದೇ ಸಂದರ್ಭದಲ್ಲಿ ಅದರ ಉಡುಗೆ ತೊಡುಗೆಗಳು ಜನಪದರ ಸಮನ್ವಯ ಸಂಸ್ಕೃತಿಯನ್ನು ಸೂಚಿಸುತ್ತವೆ. ಏಕಕಾಲದಲ್ಲಿ ವೈಷ್ಣವ ಸಂಪ್ರದಾಯದ ನಾಮ, ಶೈವ ಸಂಪ್ರದಾಯದ ವಿಭೂತಿ ಎರಡನ್ನು ಮೇಳೈಸಿಕೊಂಡಿರುವುದನ್ನು ನೋಡಬಹುದು. ರಾಮನಗರ ತಾಲ್ಲೂಕಿನ ಕಸಬಾ ಹೋಬಳಿಯ ಹನುಮಂತಗೌಡನದೊಡ್ಡಿಯ ಸಂಜೀವಯ್ಯನವರು ಈ ಕಲೆಯನ್ನು ಜೀವಂತವಾಗಿ ಇಟ್ಟಿರುವುದನ್ನು ಕಾಣಬಹುದು.

**ಐ) ಪಟಾ ಕುಣಿತ:** ವೈಷ್ಣವ ಸಂಬಂಧಿ ಸಾಂಪ್ರದಾಯಿಕ ಕುಣಿತಗಳಲ್ಲಿ ಪಟಾಕುಣಿತವೂ ಒಂದು. ಇದನ್ನು ಪ್ರಧಾನವಾಗಿ ಮಂಡ್ಯ, ಮೈಸೂರು, ತುಮಕೂರು, ರಾಮನಗರ, ಬೆಂಗಳೂರು ಜಿಲ್ಲೆಗಳಲ್ಲಿ ಆಚರಣೆಯಲ್ಲಿರುವುದನ್ನು ಕಾಣಬಹುದು. ನಂದೀಧ್ವಜವನ್ನು ಶೈವರು ತಮ್ಮ ಲಾಂಛನವನ್ನಾಗಿ ಮಾಡಿಕೊಂಡಿರುವಂತೆ ಪಟವನ್ನೂ ವೈಷ್ಣವರು ತಮ್ಮ ಲಾಂಛನ ಧ್ವಜವನ್ನಾಗಿ ಮಾಡಿಕೊಂಡಿದ್ದಾರೆನ್ನಲಾಗುತ್ತದೆ. ಈ ಹಿನ್ನೆಲೆಗಳಿಂದ

ಅವುಗಳು ಆ ಪರಂಪರೆಯ ಆಚರಣೆಯ ಪ್ರತೀಕವಾಗಿ ಜನಪದರಲ್ಲಿ ಇಂದಿಗೂ ಭಕ್ತಿಗೌರವಗಳನ್ನು ಪಡೆದುಕೊಳ್ಳುತ್ತಿವೆ. ಮೊದಮೊದಲು ಕೇವಲ ಸಾಂಪ್ರದಾಯಿಕ ಆಚರಣೆಗಳಿಗಾಗಿ ರೂಢಿಗೆ ಬಂದ ಈ ನೃತ್ಯ ಕಾಲಕ್ರಮೇಣ ಹಬ್ಬಹರಿದಿನ, ಜಾತ್ರೋತ್ಸವಗಳಲ್ಲಿ ಹಾಗೂ ಸಭೆಸಮಾರಂಭಗಳಲ್ಲೂ ಮನರಂಜನಾತ್ಮಕ ಪ್ರದರ್ಶನ ಕಲೆಯಾಗಿಯೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿರುವುದುಂಟು.

ರಾಮನಗರ ತಾಲ್ಲೂಕಿನಲ್ಲಿ ಪಟಾಕುಣಿತದ ಕಲಾವಿದರ ದಂಡೇ ಇರುವುದನ್ನು ಕಾಣಬಹುದು. ಅವರಲ್ಲಿ "ಪಟ ಕುಣಿತ ಕಲಾವಿದರ ತವರು ಮನೆ ಎಂದು ಹೆಸರು ಗಳಿಸಿರುವ ಕಸಬಾ ಹೋಬಳಿ ಚನ್ನಮಾರೇಗೌಡನದೊಡ್ಡಿ ಗ್ರಾಮದ ಕೆಂಪಯ್ಯ, ಪುಟ್ಟರುದ್ರಯ್ಯ, ಹನುಮಂತೇಗೌಡನ ದೊಡ್ಡಿ ಗ್ರಾಮದ ನಾಗರಾಜು, ಕೆಂಪಯ್ಯ, ಶ್ರೀಹರಿ, ಸಂಜೀವಯ್ಯ, ರಾಮಸಂಜೀವಯ್ಯ, ಚಂದ್ರಯ್ಯ, ಕೃಷ್ಣಪ್ಪ, ಬೋಜಣ್ಣ, ಸಿ. ಕೆ. ಹನುಮಂತಯ್ಯ, ಎಚ್. ಕೆ. ಶಿವಣ್ಣ, ಹನುಮಂತಯ್ಯ, ಶಿವಣ್ಣ, ವೆಂಕಟಶೆಟ್ಟಿ, ಹನುಮಯ್ಯ, ಶಿವಣ್ಣ, ಕಾಳೇಗೌಡನದೊಡ್ಡಿ ಗ್ರಾಮದ ಶಿವಶಂಕರಯ್ಯ, ಕೂಟಗಲ್ ಹೋಬಳಿ ಡಣಾಯಕನಪುರ ಗ್ರಾಮದ ರಾಮಚಂದ್ರಯ್ಯ, ನರಸಿಂಹಯ್ಯ, ಮೋಟಪ್ಪ, ಅಂಕನಹಳ್ಳಿ ಗ್ರಾಮದ ಶಿವಣ್ಣ, ರಮೇಶ, ಲೋಕೇಶ. ಪಿ., ಬೊಮ್ಮಾಚನಹಳ್ಳಿ ಗ್ರಾಮದ ಗೋವಿಂದಯ್ಯ ಇವರುಗಳು ತಾಲ್ಲೂಕಿನಲ್ಲಿ ಪಟದ ಕುಣಿತವನ್ನು ಒಂದು ಪ್ರಮುಖ ಕಲೆಯಾಗಿ ಜೀವಂತವಾಗಿಟ್ಟು, ಯುವಜನರಲ್ಲಿ ಅದನ್ನು ಬೆಳೆಸುತ್ತಾ ಸಾಗುತ್ತಿರುವುದನ್ನು ಕಾಣಬಹುದು."

ಒಟ್ಟಾರೆ, ಜನಪದ ಕಲೆಗಳು ಶ್ರೀಮಂತ ಕಲೆಗಳು. ಅವುಗಳನ್ನು ಅನಾವರಣಗೊಳಿಸುವಲ್ಲಿ ಇರುವ ದೋಷಗಳನ್ನು ನಾವು ಮೊದಲು ಸರಿಪಡಿಸಬೇಕು. ಶಿಸ್ತುಬದ್ಧ ಕಲಿಕೆ ಯಶಸ್ಸಿನ ಗುಟ್ಟು. ಹಾಗಿದ್ದಲ್ಲಿ ಶಿಸ್ತುಬದ್ಧವಾಗಿ ಕಲಿತು ಸೌಂದರ್ಯ ಪ್ರಜ್ಞೆಯನ್ನು ಮೈತುಂಬಿಸಿ, ಜನಪದ ನೃತ್ಯಗಳನ್ನು ಸಾರ್ವತ್ರಿಕಗೊಳಿಸಬೇಕು. ನಮ್ಮ ಅನೇಕ ಕಲಾ ಪ್ರಕಾರಗಳು ಈ ನಿಟ್ಟಿನಲ್ಲಿ ಈಗಾಗಲೇ ದಾಪುಗಾಲಿಟ್ಟಿವೆ. ತಮ್ಮ ಮೈ ಚಳಿಯನ್ನು ಕೊಡವಿಕೊಂಡು ಹೊರಬಂದಿವೆ. ಯಕ್ಷಗಾನ, ಡೊಳ್ಳಿನ ಕುಣಿತ, ಗೊರವರ ಕುಣಿತ, ವೀರಗಾಸೆ, ಲಂಬಾಣಿ ಕುಣಿತ, ಕಂಸಾಳೆ ಮುಂತಾದವು ಜನರ ಆಕರ್ಷಣೆಗೆ ಒಳಗಾಗಿವೆ. ಅವುಗಳಲ್ಲಿರುವ ಅಂತಃಸತ್ವ, ವೇಷಭೂಷಣ, ಕುಣಿತದ ರೀತಿ-ನೀತಿ ಇತ್ಯಾದಿ ಅವುಗಳನ್ನು ಮೇಲೇರಿಸಿವೆ. ಇವುಗಳಲ್ಲಿ ಕೆಲವೊಂದು ಕಲೆಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಮಿಂಚಿ ಗಮನ ಸೆಳೆದಿವೆ. ಆದರೆ ಇವುಗಳ ಯಶಸ್ಸಿನ ಹಿಂದೆ ಹಲವಾರು ಕೈಗಳು ಶ್ರಮಿಸಿವೆ ಎಂಬುದು ಗಮನಾರ್ಹ.

ಜನಪದ ಕಲೆ ಮನುಷ್ಯ ಜೀವನದ ಅವಿಭಾಜ್ಯ ಅಂಗವಾಗಿ ಹಳ್ಳಿಗರ ಬದುಕಿಗೆ ಸ್ಫೂರ್ತಿಯನ್ನೂ ಮೆರಗನ್ನು ಉಲ್ಲಾಸವನ್ನೂ ತಂದುಕೊಡುತ್ತದೆ. ಇಂದಿನ ವೈಜ್ಞಾನಿಕ

ಯುಗದಲ್ಲಿ ಜನಪದ ಕಲೆಗಳು ತಮ್ಮ ಪ್ರಾಶಸ್ತ್ಯವನ್ನು ಕಳೆದುಕೊಳ್ಳುತ್ತಿವೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಜನಪದ ಕಲಾವಿದರ ಬದುಕು ಕಷ್ಟಕರವಾದುದು; ನೆಮ್ಮದಿ ರಹಿತವಾದುದು; ಹೊತ್ತಿನ ಊಟಕ್ಕೂ ಚಿಂತಿಸಬೇಕಾದುದು. ಈ ಕಾರಣದಿಂದಲೇ ಈ ಕಲಾವಿದರು ಅವರ ಆಟಗಳು ಪ್ರೋತ್ಸಾಹದ ಕೊರತೆಯಿಂದಾಗಿ ವಿರಳವಾಗುತ್ತಿವೆ; ಕಲಿಕೆ ಉದಾಸೀನತಗೆ ಒಳಗಾಗುತ್ತಿದೆ. ಜನಪದ ಕಲೆಗಳು ಒಂದು ಕಾಲಘಟ್ಟದ ಸಾಮಾಜಿಕ ಸಂಗತಿಗಳನ್ನು ಅನಾವರಣ ಮಾಡುತ್ತವೆ. ಹಾಗೆ ನಿರ್ದಿಷ್ಟ ಜನಸಮುದಾಯಗಳನ್ನು ಪ್ರತಿನಿಧಿಸುವಂಥಹವೂ ಆಗಿವೆ. ಆ ಕಾರಣದಿಂದಲೇ ಅವು ಕಟ್ಟುಪಾಡುಗಳಿಗೆ ಒಳಗಾಗಿರುತ್ತವೆ. ಸಮುದಾಯಗಳೇ ಹೊಸ ದಿನಗಳಿಗೆ ಬದಲಾಗುತ್ತಿರುವ ಹೊತ್ತಿನಲ್ಲಿ ಪರಿವರ್ತನೆಯ ಹೆಜ್ಜೆಗಳನ್ನು ಕಲಾಮಾಧ್ಯಮದಲ್ಲೂ ತಂದುಕೊಳ್ಳುವುದು ಅನಿವಾರ್ಯವಾಗುತ್ತದೆ. ಕೆಲವೊಂದು ಬಾರಿ ನಮ್ಮ ಮೂಲ ಸಂಸ್ಕೃತಿ ನಶಿಸಿ ಹೋಗುತ್ತಿರುವಂತೆ ಆತಂಕ ತಲೆದೋರಿದರೂ ಅದರ ಪ್ರಬಲ ಅಂತಃಶಕ್ತಿ ಎಲ್ಲಿಯೋ ನಮ್ಮನ್ನು ನಿಯಂತ್ರಿಸುತ್ತಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಜನಪದ ಕಲೆಯನ್ನು ಪ್ರದರ್ಶಿಸುವವರ ಪ್ರಧಾನ ವೃತ್ತಿ ಕೃಷಿ ಅಥವಾ ಕೂಲಿ. ಉಳಿದಂತೆ ಇತರ ಉದ್ಯೋಗದವರೂ ಇದ್ದಾರೆ. ಕೃಷಿ ಚಟುವಟಿಕೆಗೆ ಬಿಡುವು ಸಿಕ್ಕಾಗ ಅಥವಾ ದೊರೆತಾಗ ಇವರು ಕಲಾ ಪ್ರದರ್ಶನದಲ್ಲಿ ತೊಡಗುತ್ತಾರೆ. ಹಗಲು ವೇಷದಂಥ ಕಲಾವಿದರು ಮಾತ್ರ ಪೂರ್ಣಾವಧಿ ಕಲಾವಿದರಾಗಿ ಈ ಪ್ರದರ್ಶನವೇ ಜೀವನಾಧಾರವಾಗಿ ಹೊಂದಿದ್ದಾರೆ. ಹೀಗಾಗಿ ಇವರನ್ನು ವೃತ್ತಿ ಕಲಾವಿದರು ಎಂದು ಗುರುತಿಸಬಹುದು. ಇದುವರೆವಿಗೂ ಹಳ್ಳಿಗರ ಜೀವನಕ್ರಮದಿಂದ, ಇನ್ನೂ ಅಸ್ತಿತ್ವದಲ್ಲಿರುವ ಈ ಕಲೆ ಮತ್ತು ಕಲಾವಿದರು ನಾಗರಿಕತೆ, ನಗರಿಕರಣದ ಜಾಲಕ್ಕೆ ಸಿಲುಕಿ ಕಾಲಪುರುಷನ ವಶದಲ್ಲಿ ಪೂರ್ಣವಾಗಿ ಕಣ್ಮರೆಯಾಗುವ ಸಾಧ್ಯತೆ ಹೆಚ್ಚಾಗಿದೆ. ಇವರ ಪರಂಪರೆ ಮತ್ತು ಸಾಂಸ್ಕೃತಿಕವಾದ ಮೌಲ್ಯವನ್ನು ಪರಿಗಣಿಸಿ, ಇಂತಹವರನ್ನು ಗುರುತಿಸಿ, ಗೌರವಿಸಬೇಕಾದ್ದು ನಮ್ಮ ಕರ್ತವ್ಯ; ಸರ್ಕಾರದ ಗುರುತರವಾದ ಹೊಣೆಯಾಗಿದೆ. ನಾವು ಎಷ್ಟೇ ಹೊಸತನದ ಹೆಜ್ಜೆಗಳನ್ನು ಇಟ್ಟು ನಡೆದರೂ ಅದು ದಾರಿತಪ್ಪಿ ಹೋಗದಂತೆ ಮಾರ್ಗದರ್ಶನವನ್ನು ನೀಡುತ್ತಾ ಬಂದಿದೆ ಎಂಬುದನ್ನು ಮರೆಯಬಾರದು. ಮಾತ್ರವಲ್ಲ ರಾಮನಗರ ತಾಲ್ಲೂಕಿನ ಜನಪದ ಕಲೆಗಳ ವಿಷಯದಲ್ಲಿಯೂ ಈ ಮಾತು ಸತ್ಯ ಎಂದರೆ ತಪ್ಪಲ್ಲ.

## ಪರಾಮರ್ಶನ ಗ್ರಂಥಗಳು:


1. ಪಾರ್ಥ ಅಂಕನಹಳ್ಳಿ, (2008), ರಾಮನಗರ: ಒಂದು ಸಾಂಸ್ಕೃತಿಕ ಅಧ್ಯಯನ, ಅಂಕನಹಳ್ಳಿ ಪ್ರಕಾಶನ, ರಾಮನಗರ.
2. ಲಿಂಗಯ್ಯ ಡಿ. & ಸಂಧ್ಯಾರೆಡ್ಡಿ ಕೆ.ಆರ್. (ಸಂ), (2006), ಜಾನಪದ ಸ್ವರೂಪ ಮತ್ತು ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
3. ವಿವೇಕ ರೈ ಬಿ.ಎ., (2000), ತುಳು ಗಾದೆಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.
4. ತಪಸ್ವಿಕುಮಾರ್ ಎನ್., (2000), ಕನ್ನಡ ಗಾದೆಗಳ ಸಮೀಕ್ಷೆ, ಚೇತನ ಬುಕ್ ಹೌಸ್, ಬೆಂಗಳೂರು.
5. ಲಕ್ಕಪ್ಪಗೌಡ ಎಚ್.ಜಿ. (ಸಂ), (1996), ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
6. ಪರಮಶಿವಯ್ಯ ಜೀ.ಶಂ., (1998), ಕನ್ನಡ ಒಗಟುಗಳು, ಸಾಹಿತ್ಯಸದನ, ಮೈಸೂರು.
7. ಜವರೇಗೌಡ ದೇ., (1976), ಜಾನಪದ ಅಧ್ಯಯನ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.
8. ಲಕ್ಕಪ್ಪಗೌಡ ಎಚ್.ಜಿ. (ಸಂ), (1996), ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
9. ಚಲುವೇಗೌಡ ತ.ಚಿ., (1978), ಕೆಲವು ಜನಪದ ಸಂಪ್ರದಾಯಗಳು, ತಳಗವಾದಿ ಪ್ರಕಾಶನ, ಮೈಸೂರು.
10. ಲಕ್ಕಪ್ಪಗೌಡ ಎಚ್.ಜೆ. (ಸಂ)., (1983), ಒಗಟುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
11. ಶಿವಸ್ವಾಮಿ ಜೆ., (1987), ರಾಮನಗರ ತಾಲ್ಲೂಕು ದರ್ಶನ, ಐಬಿಎಚ್ ಪ್ರಕಾಶನ, ಬೆಂಗಳೂರು.
12. ಅಂಬಳಿಕೆ ಹಿರಿಯಣ್ಣ, (1987), ಜಾನಪದ ವೀಕ್ಷಣೆ, ಪ್ರಜ್ವಲ ಪ್ರಕಾಶನ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.